ಮುಖ ನೋಡಿಕೊಂಡರು. ದೊಡ್ಡಕ್ಕ, 'ಮನ್ನೀಯಿಂದ ಸ್ವಲ್ಪ ಹಿಂಗಾಗ್ಯಾಳ' ಎಂದಳು. ದಡ ದಡ ಹೆಜ್ಜೆ ಹಾಕಿದ ರಾಧಳನ್ನು ಕಂಡ ದೊಡ್ಡಕ್ಕ, 'ಸಲೀಮಾ' ಎಂದು ಅವನನ್ನು ಎಚ್ಚರಿಸಿದಳು. ಓಡುತ್ತಾ ರಾಧಾಳನ್ನು ಹಿಂಬಾಲಿಸಿದ ಸಲೀಮ ಓಡಿ ಹೋಗಿ ಆಟೋ ಸ್ಟಾರ್ಟ್ ಮಾಡಿದ. ರಾಧಾ ಕುಳಿತು, 'ಅಣಾ ಮನೀಗೆ ನಡಿ' ಎಂದಳು. ಆಟೊ ಹೊರಟಿತು. ದೊಡ್ಡಕ್ಕ ಮತ್ತೇನನ್ನೋ ಆಸಾಮಿಗೆ ವಿವರಿಸುತ್ತಿದಳು.

**12**

ಮೆಲ್ಲಗೆ 'ಕೂಸುಮೋಹನ', 'ನಾನೂ ಮೋಹನ', 'ಕಕ್ಕಪ್ಪಮೋಹನ' ಎನ್ನುತ್ತಿದ್ದವಳು ಜೋರಾಗಿ 'ಇಲ್ಲೀಗ್ ಕಳ್ಸಾಕೇ ಸುಕ್ಕು, ಮುಂಜಾಲೆ ಬಂದು ನನ್ನ ಎಬ್ಸಿ ಹೋದ್ಲು' ಎಂದು ನಕ್ಕಳು. ಸುಮ್ಮನೆ ಕುಂತು ಇಲ್ಲಿಯವರೆಗಿನ ತನ್ನ ಜೀವನವನ್ನು ನೆನೆದವಳಿಗೆ ಅದು ಅರ್ಧ ಮುಗಿದ ಸಿನಿಮಾದಂತೆನಿಸಿ ಮತ್ತೆ ಸ್ವಲ್ಪ ಹೊತ್ತು ಬಿಟ್ಟು, 'ಇದಿನ್ನಾ ಇಂಟರ್‌ವೆಲ್ಲು. ಇದಾದ ಮೇಲೆ ಸುಕ್ಕೂ ಸಿಗ್ತಾಳ...' ಎಂದು ಬಡ ಬಡಿಸಿದಳು. ಇಷ್ಟೆಲ್ಲವನ್ನೂ ಬಹಳ ಹೊತ್ತಿನಿಂದ ತಳ ಬುಡವಿಲ್ಲದೇ ಕೇಳಿಸಿಕೊಂಡ ಸಲೀಮ ಗಾಬರಿಯಲ್ಲಿ ಆಟೊವನ್ನು ಸರಿಯಾದ ಕಡೆ ತಿರುಗಿಸದೇ ರಾಧಾಳ ಸಿಗ್ನಲ್ಲಿನ ಎದುರಿನ ರಸ್ತೆಗೆ ತಂದಿದ್ದ. ಸಿಗ್ನಲ್ಲು ಬಿದ್ದು ಆಟೊ ನಿಂತಿತು. ಸುತ್ತಲೂ ನೋಡಿದ ರಾಧಾ ಬಡ ಬಡ ಆಟೊ ಇಳಿದು ವಾಹನಗಳಿಂದ ತುಂಬಿದ್ದ ತನ್ನ ಸಿಗ್ನಲ್ಲಿನ ಕಡೆ ಓಡಲತ್ತಿದಳು. ಸಲೀಮ ಇಳಿದು ಕೂಗಿದ. ತನ್ನ ಸಿಗ್ನಲ್ಲಿನಲ್ಲಿ ರಾಧಾ 'ಸುಕ್ಕೂ ನೀನು ಕಕ್ಕಪ್ಪುನ್ನ ಹುಡ್ಕಿ ಕೊಟ್ಟೆ, ಕಕ್ಕಪ್ಪ ನಿನ್ನ ಹುಡ್ಕಿ ಕೊಡ್ತಾನ' ಎಂದು ಜೋರಾಗಿ ಹೇಳಿಕೊಂಡು ಇದ್ದ ಕಸುವನ್ನೆಲ್ಲಾ ಹಾಕಿ ಜೋರು ಚಪ್ಪಾಳೆ ತಟ್ಟಿ ಗಾಡಿಗಳ ಬಳಿ ಹೋದಳು.

ಅವಳು ತಟ್ಟಿದ ಚಪ್ಪಾಳೆ ಸುತ್ತಲಿನ ವಾತವರಣದಲ್ಲಿ ಅವಳಿಗೆ ಕೇಳಿಸುವ ಒಂದೇ ಒಂದು ಬಗೆಯ ಶಬ್ದವಾಗಿ ಅದರ ಪ್ರತಿಧ್ವನಿಗಳು ಇನ್ನೂ ಜೋರು ಜೋರಾಗಿ ಅವಳಿಗೇ ಕೇಳಿಸಲತ್ತುತ್ತಿದ್ದಂತೆ ರಾಧಾ ಸುಮ್ಮನಾಗದೇ ಚಪ್ಪಾಳೆ ತಟ್ಟುವುದನ್ನು ಮತ್ತಷ್ಟು ಜೋರು ಮಾಡುತ್ತಲೇ ಹೋದಳು...

(ಬೆಂಗಳೂರಿನ 'ಸುಚಿತ್ರಾ ಸಿನೆಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ' ತನ್ನ 'ಕಥಾಕಮ್ಮಟ'ದ

## ಪ್ರವೀಣಕುಮಾರ್ ಜಿ.

ಊರು ಬಳ್ಳಾರಿ. ಬೆಂಗಳೂರಿನ ಪಿ.ಇ.ಎಸ್.ಐ.ಟಿ ಕಾಲೇಜಿನ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಶನ್ ಎಂಜಿನಿಯರಿಂಗ್ ಪದವೀಧರ.

ಸದ್ಯ ಬೆಂಗಳೂರಿನಲ್ಲಿ ವಾಸ ಮತ್ತು ಕಳೆದ ನಾಲ್ಕು ವರ್ಷಗಳಿಂದ ಕನ್ನಡ ಸಿನಿಮಾಗಳಲ್ಲಿ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದಾರೆ. 'ಕೂರ್ಮಾವತಾರ', 'ಸಕ್ಕರೆ', 'ಎಂದೆಂದೂ ನಿನಗಾಗಿ' ಮತ್ತು 'ಕಹಿ' ಚಲನಚಿತ್ರಗಳ ನಂತರ ಇದೀಗ 'ದನ ಕಾಯೋನು' ಚಿತ್ರದ ಕೆಲಸದಲ್ಲಿ ತೊಡಗಿಕೊಂಡಿದ್ದಾರೆ.